ದಿ: 22-11-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಂ.ಎಸ್.ಎಸ್. ವಕೀಲರಿಂದ :-

1. ನಮ್ಮ ತಂದೆಯ ಅಣ್ಣ ತಿಪ್ಪೇಶ್ವಪ್ಪನಿಗೆ ಸುಮಾರು 65 ವರ್ಷ ಆಗಿರುತ್ತದೆ. ನಮ್ಮ ತಂದೆಗೆ 60 ವರ್ಷ. ನನ್ನ ಚಿಕ್ಕಪ್ಪನಿಗೆ 50 ವರ್ಷ. ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪ ವ್ಯವಸಾಯಗಾರರು ಅಂದರೆ ಸರಿ. ನನ್ನ ದೊಡ್ಡಪ್ಪ, ನನ್ನ ತಂದೆ, ನನ್ನ ಚಿಕ್ಕಪ್ಪ ಬೇರೆ ಬೇರೆಯಾಗಿ ಸುಮಾರು 20 ವರ್ಷಗಳಿಂದ ವಾಸಿಸುತ್ತಿದ್ದಾರೆ. ನನ್ನ ತಂದೆ ಹಾಗೂ ಅವರ ಸಹೋದರರು ಪ್ರತ್ಯೇಕ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ. ಸರ್ಕಾರದಿಂದ ಮಂಜೂರಾಗಿದ್ದ ನಿವೇಶನಗಳಲ್ಲಿ ನನ್ನ ತಂದೆ ಹಾಗೂ ಅವರ ಸಹೋದರರು ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಆ ಬಗ್ಗೆ ದಾಖಲೆಗಳು ಲಭ್ಯವಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆ ಹಾಗೂ ಅವರ ಸಹೋದರರು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ನಮ್ಮ ತಂದೆ ಹಾಗೂ ಅವರ ಸಹೋದರರು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡಿರುತ್ತಾರೆ. ನಮ್ಮ ದೊಡ್ಡಪ್ಪ ಹಾಗೂ ಅವರ ಸಹೋದರರು ತಾವು ಬೇಸಾಯ ಮಾಡುತ್ತಿರುವ ಜಮೀನುಗಳಿಂದ ಬಂದಂತಹ ಬೆಳೆಯನ್ನು ಅವರವರು ತೆಗೆದುಕೊಳ್ಳುತ್ತಿದ್ದಾರೆ ಅಂದರೆ ಸರಿ. ಪ್ರತ್ಯೇಕವಾಗಿ ಜಮೀನುಗಳನ್ನು ಉಳುಮೆ ಮಾಡುತ್ತಿರುವಂತೆ ಪಹಣಿ ಪತ್ರಿಕೆಗಳು ಬಂದಿರುವುದಿಲ್ಲ.

2. ಉಳುಮೆ ಮಾಡುತ್ತಿರುವ ತಮ್ಮ ಜಮೀನುಗಳ ಪ್ರತ್ಯೇಕ ಖಾತೆಗಳನ್ನು ಮಾಡಿಸಿಕೊಳ್ಳಲು ಪ್ರಯತ್ನಿಸಿದ್ದು, ಅದಕ್ಕೆ ನನ್ನ ತಾತನ ಸಹೋದರರು ಅನುಮತಿ ಕೊಟ್ಟಿರುವುದಿಲ್ಲ. ಕಳೆದ 10 ವರ್ಷಗಳಿಂದಲೂ ನಾವು ಅನುಭವಿಸುತ್ತಿರುವ ಜಮೀನುಗಳನ್ನು ಪ್ರತ್ಯೇಕವಾಗಿ ಖಾತೆ ಮಾಡಿಸಿಕೊಳ್ಳಲು ಅವರನ್ನು ಕೇಳುತ್ತಿದ್ದೇವೆ. ನಮ್ಮ ತಂದೆ ಹಾಗೂ ಅವರ ಸಹೋದರರು ಕಂದಾಯ ಇಲಾಖೆಗೆ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾನು ಹಾಗೂ ನನ್ನ ಇತರೆ ಸಹೋದರರು ಪ್ರಾಪ್ತರಾದ ನಂತರ ಖಾತೆ ಮಾಡಿಸಿಕೊಡಲು ಅರ್ಜಿಯನ್ನು ಕೊಟ್ಟಿರುವುದಿಲ್ಲ. ಖಾತೆ ಮಾಡಿ ಕೊಡಲು ಅನುಮತಿ ಕೊಡುವಂತೆ ಅವರಿಗೆ ನೋಟೀಸನ್ನು ನಾವು ಕೊಟ್ಟಿರುವುದಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ಆರೋಗ್ಯದಿಂದ ಇರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಿದ್ದವ್ವ ಕೋಂ ತಿಮ್ಮಯ್ಯ ಎಂದು ಬರೆಸಿರುತ್ತೇನೆ. ಸದರಿ ಸಿದ್ದವ್ವ ಕೋಂ ತಿಮ್ಮಯ್ಯನವರನ್ನು ನಾನು ನೋಡಿರುವುದಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ಸದರಿ ಸಿದ್ದವ್ವಳನ್ನು ನೋಡಿರುತ್ತಾರೆ.

3. ಮೂಲ ಪುರುಷ ಭೋಗಪ್ಪ ಎಂದು ಬರೆಸಿರುತ್ತೇನೆ. ಸದರಿ ಸಿದ್ದವ್ವನಿಗೆ ಮಕ್ಕಳಿರಲಿಲ್ಲ ಅಂದರೆ ಸರಿ. ಸದರಿ ಸಿದ್ದವ್ವ ಮೂಲಪುರುಷ ಬೋಗಪ್ಪನನ್ನು ಸಾಕಿಕೊಂಡಿದ್ದರು ಅಂದರೆ ಸಾಕ್ಷಿಯು ಸದರಿ ಬೋಗಪ್ಪನಿಗೆ ಮದುವೆಯಾಗಿ ಮಕ್ಕಳಾದ ನಂತರ ಆತನನ್ನು ಕರೆದುಕೊಂಡು

ಹೋಗಿ ಸಾಕಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ಸಿದ್ದವ್ವ ಬೋಗಪ್ಪನವರನ್ನು ಸಾಕಿಕೊಂಡಿದ್ದ ವಿಚಾರ ನನ್ನ ತಂದೆ ಹಾಗೂ ಅವರ ಸಹೋದರರಿಗೆ ಗೊತ್ತಿರುತ್ತದೆ ಅಂದರೆ ಸರಿ. ಸಿದ್ದವ್ವ ತನ್ನ ಆಸ್ತಿಯನ್ನು ಮೂಲಪುರುಷ ಬೋಗಪ್ಪನಿಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ಸಿದ್ದವ್ವನ ಸ್ವತ್ತುಗಳು ನಮ್ಮ ತಾತ ತಿಮ್ಮಪ್ಪನವರ ಹೆಸರಿನಲ್ಲಿ ಪೌತಿ ಖಾತೆ ಮೇರೆಗೆ ಇದ್ದವು. ನಮ್ಮ ತಾತ ತಿಮ್ಮಪ್ಪ ತೀರಿಕೊಂಡು ಸುಮಾರು 20 ವರ್ಷ ಆಗಿರುತ್ತದೆ. ನಮ್ಮ ತಿಮ್ಮಪ್ಪನ ಹೆಸರಿನಲ್ಲಿದ್ದ ಖಾತೆಯನ್ನು 1 ಮತ್ತು 2 ನೇ ಪ್ರತಿವಾದಿಯರು 1985 ನೇ ವರ್ಷದಲ್ಲಿ ಮಾಡಿಸಿಕೊಂಡಿದ್ದರು. ಸಿದ್ದವ್ವನ ಸ್ವತ್ತುಗಳನ್ನು ನಾವು ಅನುಭವಿಸುತ್ತಿದ್ದರೂ ಖಾತೆ 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ.

4. ಮೂಲಪುರುಷ ಬೋಗಪ್ಪನ ಮಗ ಬೋಗಪ್ಪ ಅಂದರೆ ವಾದಿಯರ ತಂದೆ ಯಾವ ವರ್ಷದಲ್ಲಿ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಕ್ಯಾನ್ಸರ್ ಕಾಯಿಲೆ ಇತ್ತು ಅಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಹಾಗೂ ಅವರ ಸಹೋದರರಿಗೆ ವಾದಿಯರ ತಂದೆಯ ವಿಚಾರ ಚೆನ್ನಾಗಿ ತಿಳಿದಿರುತ್ತದೆ ಅಂದರೆ ಸರಿ. ವಾದಿಯರ ತಂದೆಯನ್ನು ನಾನು ನೋಡಿರುವುದಿಲ್ಲ. ಮೂಲ ಪುರುಷ ಬೋಗಪ್ಪನ 2 ನೇ ಹೆಂಡತಿ ಕೆಂಗಜ್ಜಿಯ ಮೂರು ಜನ ಮಕ್ಕಳು ಒಟ್ಟಿಗೆ ಇದ್ದರು ಅಂದರೆ ಸರಿ. ವಾದಿಯರ ತಂದೆ ಬೋಗಪ್ಪ ಮತ್ತು ಅವರ ಸಹೋದರರು ಭಾಗ ಮಾಡಿ ಕೊಂಡಿರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಮ್ಮ ತಾತ ತಿಮ್ಮಪ್ಪ ಬಹಳ ಹಿಂದೆಯೇ ತನ್ನ ಭಾಗ ಪಡೆದು ಬೇರೆಯಾಗಿದ್ದರು ಅಂದರೆ ಸರಿಯಲ್ಲ. ನಮ್ಮ ತಾತ ತಿಮ್ಮಪ್ಪನಿಗೆ ಭಾಗದಲ್ಲಿ ಬಂದ ಸ್ವತ್ತುಗಳನ್ನು ನಮ್ಮ ತಂದೆ ಹಾಗೂ ಅವರ ಸಹೋದರರು ಹಂಚಿಕೊಂಡಿರುತ್ತಾರೆ ಅಂದರೆ ಸರಿಯಲ್ಲ.

5. ಈ ದಾವೆಯ ವಿಚಾರ ನನಗೆ ಮೊದಲಿನಿಂದಲೂ ತಿಳಿದಿರುತ್ತದೆ ಅಂದರೆ ಸರಿ. ಸದರಿ ದಾವೆಯ ವಿಚಾರ ನನ್ನ ತಂದೆ ಹಾಗೂ ಸಹೋದರರಿಗೂ ಗೊತ್ತು ಅಂದರೆ ಸರಿ. ನನ್ನ ತಾತ ಭಾಗದ ಸ್ವತ್ತುಗಳನ್ನು ನಾವು ಅನುಭವಿಸುತ್ತಿದ್ದರೂ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕೆಂಗಜ್ಜಿಯ ಮ್ಕಕ್ಕಳು ಅವರ ಭಾಗದ ಸ್ವತ್ತುಗಳ ಬಗ್ಗೆ ವ್ಯಾಜ್ಯ ಮಾಡುತ್ತಿದ್ದು, ನಮಗೆ ಅದು ಸಂಬಂಧಪಟ್ಟಿರುವುದಿಲ್ಲ ಎಂದು ನಾವು ಸುಮ್ಮನಾಗಿದ್ದೆವು ಅಂದರೆ ಸರಿಯಲ್ಲ. ಈ ದಾವೆಯಲ್ಲಿ ಯಾವ ಸ್ವತ್ತುಗಳಲ್ಲಿ ಭಾಗವನ್ನು ವಾದಿಯರು ಕೇಳಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ವಾದಿಯರು ತಮ್ಮ ತಂದೆ ಭಾಗ ತಮಗೆ ಬರಬೇಕು ಎಂದು ಈ ದಾವೆ ಹೂಡಿರುತ್ತಾರೆ ಅಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಅಂದರೆ ಸಾಕ್ಷಿಯು ರಿ.ಸ.ನಂ.79/1 ರ ಜಮೀನಿನಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾವು ದಾಖಲೆಗಳನ್ನು ನ್ಯಾಯಾಯಕ್ಕೆ ಹಾಜರುಪಡಿಸಿರುತ್ತೇವೆ. ದಾವಾ ಸ್ವತ್ತುಗಳಿಗೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಅಂದರೆ ಸರಿಯಲ್ಲ.

6. ಸಿದ್ದವ್ವ ನಮ್ಮ ತಾತನಿಗೆ ಆಸ್ತಿಕೊಟ್ಟಿರುತ್ತಾರೆ ಎಂದು ತೋರಿಸಲು ಆರ್.ಆರ್.ಉತಾರ ಮತ್ತು ಮೂಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಿದ್ದವ್ವ ತನ್ನ ಆಸ್ತಿಗಳ ಬಗ್ಗೆ ನಮ್ಮ ತಾತಮನಿಗೆ ಯಾವುದಾದರೂ ದಾಖಲೆಗಳನ್ನು ಬರೆದು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನಿಸಿ ಎ.ಸಿ. ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಸಿರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರಿಗೆ ನಮಗೆ ಮೋಸ ಆಗಿರುತ್ತದೆ. ನಮ್ಮ ತಾತನ ಭಾಗಕ್ಕೆ ಈಗಾಗಲೇ ಸ್ವತ್ತುಗಳು ಬಂದಿದ್ದು, ಅದನ್ನು ನಮ್ಮ ತಂದೆ ಮತ್ತು ಅವರ ಸಹೋದರರು ಹಂಚಿಕೊಂಡಿದ್ದರೂ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ವನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು : ಶ್ರೀ ಎನ್.ಜಿ. ವಕೀಲರಿಂದ :-</u>

1. ಸಿದ್ದಜ್ಜಿಯ ಕಿರಿಯ ಮಗಳ ಹೆಸರು ನನಗೆ ಗೊತ್ತಿಲ್ಲ. ನಾಗೇನಹಳ್ಳಿಯ ತಿಮ್ಮಣ ಯಾರು ಎಂದು ನನಗೆ ಗೊತ್ತಿಲ್ಲ. ಸಿದ್ದಜ್ಜಿಯ 2 ನೇ ಮಗಳು ಯಾರೆಂದು ನನಗೆ ಗೊತ್ತಿಲ್ಲ. ರಿ.ಸ.ನಂ.79/1 ರಲ್ಲಿ ಒಟ್ಟು 10 ಎಕರೆ 9 ಗುಂಟೆ ಇರುತ್ತದೆ. ಸದರಿ ಸ್ವತ್ತಿಗೆ ಮಾತ್ರ ತಕರಾರು ಸಲ್ಲಿಸಿರುತ್ತೇನೆ ಅಂದರೆ ಸಾಕ್ಷಿಯು ಸದರಿ ಸ್ವತ್ತು ಮತ್ತು ನಮ್ಮ ತಾತನ ಆಸ್ತಿಗೆ ಸಂಬಂಧಿಸಿದಂತೆ ತಕರಾರು ಸಲ್ಲಿಸಿರುತ್ತೇನೆ ಅಂತ ನುಡಿಯುತ್ತಾರೆ. ನಮ್ಮ ತಾತನೂ ಸೇರಿದಂತೆ ಅವರು ಒಟ್ಟು 04 ಜನ ಅಣ್ಣತಮ್ಮಂದಿರು. ನಮ್ಮ ತಾತ ಹಾಗೂ ಅವರ ಸಹೋದರರು 1953 ರಲ್ಲಿ ಭಾಗ ಮಾಡಿಕೊಂಡಿದ್ದರು ಅಂದರೆ ನನಗೆ ಗೊತ್ತಿಲ್ಲ. ನಮ್ಮ ತಾತನ ಭಾಗಕ್ಕೆ ಯಾವ ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ಹಾಗೂ ಅವರ ಸಹೋದರರು ಭಾಗ ಆಗಿರಲಿಲ್ಲ. ದಾವಾ ಸ್ವತ್ತುಗಳು ಯಾರಿಗೆ ಸಂಬಂಭಪಟ್ಟಿರುತ್ತವೆ ಎಂದು ನನಗೆ ಗೊತ್ತಿಲ್ಲ. ಬೋಗಪ್ಪ ವಿಲ್ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. ಸದರಿ ವಿಲ್ ಪ್ರಕಾರ ಸ್ವತ್ತುಗಳನ್ನು ಯಾರು ಅನುಭವಿಸುತ್ತಿದ್ದಾರೆ ಅಂತ ನನಗೆ ಗೊತ್ತಿಲ್ಲ. ರಿ.ಸ.ನಂ.79/1 ರಲ್ಲಿ 2 ಎಕೆರೆ 10 ಗುಂಟೆ ನಮ್ಮ ತಾತ ತಿಮ್ಮಣ್ಣ, 02 ಎಕರೆ 20 ಗುಂಟೆ ಬೋಗಪ್ಪ, 2 ಎಕರೆ 10 ಗುಂಟೆ ಹನುಮಂತಪ್ಪ, ಮತ್ತು 03 ಎಕರೆ 09 ಗುಂಟೆ ಸಣ್ಣ ತಿಮ್ಮಪ್ಪ ಅನುಭವಿಸುತ್ತಿರುವ ಜಮೀನುಗಳ ಚೆಕ್ಕುಬಂಧಿ ನನಗೆ ಗೊತ್ತಿಲ್ಲ.

2. ನಮ್ಮ ತಾತ ರಿ.ಸ.ನಂ.79/1 ರಲ್ಲಿ ಜಮೀನನ್ನು ಅನುಭವಿಸುತ್ತಿದ್ದರು. ನಮ್ಮ ತಾತ ಸದರಿ ರಿ.ಸ.ನಂ.ನ ಸುಮಾರು 2 ಎಕರೆ ಜಮೀನನ್ನು ಅನುಭವಿಸುತ್ತಿದ್ದರು. ನಾವು ಅನುಭವಿಸುತ್ತಿರುವ ಸದರಿ 2 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿದ್ದಾರೆ. ಸದರಿ 02 ಎಕರೆ ಜಮೀನು ನಮ್ಮ ತಾತ ತಿಮ್ಮಪ್ಪನ ಭಾಗಕ್ಕೆ ಬಂದಂತಹ ಸ್ವತ್ತಾಗಿರುತ್ತದೆ ಅಂದರೆ ಸರಿ. ರಿ.ಸ.ನಂ.79/1 ರಲ್ಲಿ 2 ಎಕೆರೆ 10 ಗುಂಟೆಯನ್ನು ನಮ್ಮ ತಾತ ತಿಮ್ಮಣ್ಣ, 02 ಎಕರೆ 20 ಗುಂಟೆ ಬೋಗಪ್ಪ, 2 ಎಕರೆ 10 ಗುಂಟೆ ಹನುಮಂತಪ್ಪ, ಮತ್ತು 03 ಎಕರೆ 09 ಗುಂಟೆ ಸಣ್ಣ ತಿಮ್ಮಪ್ಪ ಅನುಭವಿಸುತ್ತಿದ್ದಾರೆ ಅಂದರೆ ಸರಿ.

ಬೋಗಪ್ಪನ ಭಾಗಕ್ಕೆ ಹೋದ 02 ಎಕರೆ 20 ಗುಂಟೆ ಜಮೀನನ್ನು ಅವರು ವಿಲ್ ಮಾಡಿ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ದಿ: 14-04-1993 ರಲ್ಲಿ ಉಳಿಕೆ ಜಮೀನಿನ ಖಾತೆ ಮಾಡಿಸಿಕೊಳ್ಳಬಹುದು ಎಂದು ನಮ್ಮ ತಾತ ಈಗ ನನಗೆ ತೋರಿಸಿದ ಪ್ರಮಾಣ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ.

3. ರಿ.ಸ.ನಂ.79/1 ರಲ್ಲಿ 2 ಎಕರೆ 10 ಗುಂಟೆ ಜಮೀನನ್ನು ಬಿಟ್ಟು ಬೇರೆ ದಾವಾ ಸ್ವತ್ತುಗಳ ಮೇಲೆ ನಮಗೆ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಖರೀದಿಸಿರುವ ಕೆಲವು ಆಸ್ತಿಗಳು ನಮಗೆ ಸಂಬಂಧಪಟ್ಟಿರುವುದಿಲ್ಲ ಅಂದರೆ ಸಾಕ್ಷಿಯು ಕೆಲವು ಸ್ವತ್ತುಗಳು ನಮಗೆ ಸಂಬಂಧಪಟ್ಟಿರುತ್ತವೆ, ಕೆಲವು ಸ್ವತ್ತುಗಳು ಸಂಬಂಧಪಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಮಗೆ ಸಂಬಂಧಿಸಿದ ಸ್ವತ್ತುಗಳು ಯಾವುವು ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳ ಪೈಕಿ ಪಿತ್ರಾರ್ಜಿತ ಆಸ್ತಿಗಳು ಯಾವುವು, ಪ್ರತಿವಾದಿಯರ ಸ್ವಯಾರ್ಜಿತ ಸ್ವತ್ತುಗಳು ಯಾವುವು ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯರ ಸ್ವಯಾರ್ಜಿತ ಸ್ವತ್ತುಗಳನ್ನು ಈ ದಾವೆಯಲ್ಲಿ ವಾದಿಯರು ಸೇರಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಸ್ವಯಾರ್ಜಿತ ಸ್ವತ್ತುಗಳಲ್ಲಿ ನಾವು ಭಾಗಾಂಶವನ್ನು ಕೇಳುವುದಿಲ್ಲ ನಮ್ಮ ತಂದೆಯ ತಂದೆಯ ಸ್ವತ್ತುಗಳಲ್ಲಿ ನಾವು ಭಾಗಾಂಶವನ್ನು ಕೇಳುತ್ತಿದ್ದೇವೆ. ನಮ್ಮ ತಾತನ ಪಿತ್ರಾರ್ಜಿತ ಸ್ವತ್ತುಗಳು ದಾವಾ ಐಟಂ ಸ್ವತ್ತುಗಳಲ್ಲಿ ಯಾವುವು ಎಂದು ನನಗೆ ಹೇಳಲು ಆಗುವುದಿಲ್ಲ. ರಿ.ಸ.ನಂ.79/1 ರ 2 ಎಕರೆ 10 ಗುಂಟೆ ಹೊರತುಪಡಿಸಿ, ಬೇರೆ ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ